ಫಾಲನೇತ್ರ ಸಜ್ಜನ, ಶಿರಸಿ

*ಹಾಗಲಕಾಯಿ ಅಧರಕ್ಕೆ ಕಹಿ, ಉದರಕ್ಕೆ ಸಿಹಿ. ಕಪ್ಪು ಹಣ?*



ಉದುರಿದಾಗ ಸಿಹಿ; ಅದುರಿದಾಗ ಕಹಿ.

ಬೋ.ಪಾ. ವೆಂಕಟೇಶ್, ಸಮೇತನಹಳ್ಳಿ

*ಖಾದಿ, ಕಾವಿ, ಖಾಕಿ; ಇವುಗಳ ಮಹತ್ವವೇನು?*

ಗ್ರಹ, ನಿಗ್ರಹ, ಪರಿಗ್ರಹ.

ಪಿ.ಜಯವಂತ ಪೈ, ಕುಂದಾಪುರ

*ಹೋಗುವಾಗ ಯಾರೂ ಏನನ್ನೂ ಒಯ್ಯುವುದಿಲ್ಲವೆಂದು ತಿಳಿದೂ ಇಂಚಿಂಚು ಜಾಗಕ್ಕೂ ಜಗಳ ಆಡುವರಲ್ಲಾ?*

ಶವಕ್ಕೆ ಆಕ್ಸಿಜನ್ ಬೇಕಿಲ್ಲ; ಅಲ್ಲಿಯವರೆಗೆ ಬೇಕೇಬೇಕಲ್ಲ!

ಹಾಡ್ಯ ಬಿ. ಜಯಾನಂದ, ಮೈಸೂರು

*ನಿಮ್ಮ ಅಭಿಪ್ರಾಯದಲ್ಲಿ ನೆಮ್ಮದಿಯ ಜೀವನ ಮಾಡಲು ಏನು ಬೇಕು?*

ಆಕಳಿನಂತಹ ಅತ್ತೆ; ಕೋಲೆಬಸವನಂತಹ ಮಾವ; ಮೂಕ ಮಡದಿ.

ಕೆ.ಎಂ. ವಿಭೂತಿ, ಹರಿಹರ

*ಯುಗಳ ಗೀತೆಗೂ, ಜೋಗುಳಕ್ಕೂ ಇರುವ ಅಂತರವೇನು ಗುರುವೆ?*




ಕನಿಷ್ಠ ಒಂಬತ್ತು ತಿಂಗಳು.

ಕುಮಾರ ಚಲವಾದಿ, ಹೊಳೆನರಸಿಪುರ

*ಭಗವದ್ಗೀತೆ, ಬೈಬಲ್, ಕುರಾನ್, ಎಲ್ಲವನ್ನೂ ಕ್ರೋಢೀಕರಿಸಿ ಒಂದೇ ಧರ್ಮಗ್ರಂಥ ಮಾಡಲು ಆಗುವುದಿಲ್ಲವೆ?*

ಪೇಪರ್ ವೇಸ್ಟ್ ಅಷ್ಟೆ; ಮಾನವಧರ್ಮವೊಂದನ್ನು ಅನುಸರಿಸಿ; ಮಿಕ್ಕೆಲ್ಲ ಧರ್ಮಗಳು ಹಿಂದೆಯೇ ಬರುತ್ತವೆ.

ಗಣೇಶ ಎಂ. ಪೈ, ಬೆಂಗಳೂರು

*ಸಿಟ್ಟು ಬಂದಾಗಲೆಲ್ಲ ಇವಳು ಅಡುಗೆಗೆ ಹೆಚ್ಚು ಉಪ್ಪು ಅಥವಾ ಖಾರ ಹಾಕುತ್ತಾಳೆ. ಇದಕ್ಕೆ ಪರಿಹಾರವೇನು?*

ಆಕೆಯ ತವರಿನವರನ್ನು ಊಟಕ್ಕೆ ಕರೆಯಿರಿ; ರುಚಿ ಮರಳುತ್ತದೆ.

ಮಹಾವೀರ ಕಾಸರ, ಶಿವಮೊಗ್ಗ

*ಮಹಿಳೆಯನ್ನು ನೀರೆ ಎಂದು ಕರೆಯುವುದೇಕೆ?*

ಏಕೆಂದರೆ ಅವಳು ತವರಿನಿಂದ ಪತಿಯ ಮನೆಗೆ ಹರಿವ ಶುಭ್ರ ನೀರೇ.

ಮಲ್ಲಿಕಾರ್ಜುನ ಗಚ್ಚಿ, ಗೋಗಿ

*ಕರ್ಣನ ಅವಸಾನಕ್ಕೆ ಕಾರಣವಾದ ವಚನಗಳನ್ನು ಪಡೆದ ಕುಂತಿ ತಾಯಿಯೆನ್ನಲು ಯೋಗ್ಯಳೆ?*

ರಾಂಗ್ ಸೈಡಲ್ಲಿ ಹೈಸ್ಪೀಡಲ್ಲಿ ಬರುವೆನೆಂದು ಹಠ ಹಿಡಿದ ಮಗನಿಂದ ವಾಹನ ಕಸಿದುಕೊಳ್ಳುವುದು ತಪ್ಪಲ್ಲ. ಕುಂತಿ ಮಾಡಿದ್ದು ಅದೇ.

ಆರ್.ಎಸ್. ಲಕ್ಷ್ಮೀಕಾಂತ, ಬೆಂಗಳೂರು

*ಯುಕ್ತಿಯಿಂದ ಲೋಕಾಯುಕ್ತರ ನೇಮಕ ಕರ್ನಾಟಕದಲ್ಲಿ ಆಗಿಲ್ಲವೆಂದು ಕಾಣುತ್ತೆ. ಹೌದೆ?*

ಸಾಧ್ಯವೂ ಇಲ್ಲ. 'ಮುಕ್ತ ಮುಕ್ತ ಮುಕ್ತಾ' ಕುಳಿತ ಮುಕ್ಕಣ್ಣರಿಗೆ ಕುಯುಕ್ತಿಗೆ ಮಣಿಯುವ ಆಯುಕ್ತರೇ ಯುಕ್ತ.

ಕೃಷ್ಣಮೂರ್ತಿ ಎಸ್, ಬೆಂಗಳೂರು

*ನಾನು ಕಿವುಡ. ಸುಂದರ ಮೂಕಿ ಹುಡುಗಿಯೊಂದಿಗೆ ಮದುವೆ ನಿಶ್ಚಯವಾಗಿದೆ. ಮದುವೆಯಾಗಲೋ, ಬೇಡವೋ?*

ಕೇಳುವುದೇ ವ್ಯರ್ಥ; ಮಾತಿಲ್ಲದೆ ಮದುವೆಯಾಗಿಬಿಡಿ.

ಉಷಾ ಸೋಗಲ್, ಬೆಂಗಳೂರು

*ಹೊಡೆಯುವುದಕ್ಕೂ, ಒಡೆಯುವುದಕ್ಕೂ ಏನು ವ್ಯತ್ಯಾಸ?*

ಲಂಚಕ್ಕೂ, ಪಕ್ಷಕ್ಕೂ ಇರುವಷ್ಟೇ.... ಲಂಚ ಹೊಡೆಯುತ್ತಾರೆ; ಪಕ್ಷ ಒಡೆಯುತ್ತಾರೆ.

ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

*ಪ್ರಶ್ನೆ ಕೇಳುವ ನಾವು ನಚಿಕೇತ ಆದರೆ ಉತ್ತರಿಸುವ ನೀವು?*

ಯಮ ಎನ್ನುವಿರೆ? ನಿಜವೆ... ಯ– ಯಡವಟ್ಟುಗಳನ್ನು; ಮ – ಮಥಿಸುವವನು.

## ಬಹುಮಾನಿತ ಪ್ರಶ್ನೆ

ಎಚ್.ಆರ್. ದೇಸಾಯಿ, ರಾಯಚೂರು

*ಗಲ್ಲುಶಿಕ್ಷೆಗೆ ಈಡಾದವನನ್ನು 'ನಿನ್ನ ಕೊನೆಯ ಆಸೆ ಏನು?' ಎಂದಾಗ 'ಬಿಡುಗಡೆ' ಎಂದರೆ?*

'ಆಗಲಿ. ನಶ್ವರವಾದ ದೇಹದಿಂದ ನಿನ್ನ ಆತ್ಮವನ್ನು ಬಿಡುಗಡೆ ಮಾಡುತ್ತೇವೆ' ಎನ್ನುವರಂತೆ.

ಅಮರಯ್ಯಾ ಪತ್ರಿಮಠ, ಸುರಪೂರ

*ವಿಚಿತ್ರ, ಆದರೂ ಸತ್ಯ! ಏನದು?*

ಟೈಮೇ ಇಲ್ಲ ಎಂದು ಪರದಾಡುವವರು ಯಾರದೋ ಆಕ್ಸಿಡೆಂಟ್ ಸುತ್ತ ಗಂಟೆಗಟ್ಟಲೆ ಸಮಯ ಕಳೆಯುವುದು!

ಪಿ.ಜಿ. ರಾಘವೇಂದ್ರ, ಮೈಸೂರು

*ಸೇರನ್ನು ಒದ್ದು ಗಂಡನ ಮನೆಗೆ ಕಾಲಿಡುವಂತೆ ಸೆರೆಮನೆ ಪ್ರವೇಶಿಸುವಾಗ ಏನನ್ನು ಒದೆಯುತ್ತಾರೆ?*

ಒದೆಯುವ ಪ್ರಶ್ನೆಯೇ ಇಲ್ಲ; ಇವರೇ ಸೇರು!

ಅನಂತಪದ್ಮನಾಭ ಹೆಚ್.ಎಂ., ಮೈಸೂರು

*ವಿದ್ಯಾರ್ಥಿಗಳಿಗೆ ಪರೀಕ್ಷೆ ಹಾಲ್‌ನಲ್ಲಿ ನೆನಪು ಕೈ ಕೊಡುತ್ತದಲ್ಲಾ, ಏಕೆ?*

ದುಂಬಿ ಕೊರೆದಂತೆ ಕೊರೆಯುವ ಗುರುಗಳಿಗೆ ಕರ್ಣವಿತ್ತು ಕೇಳಿಸಿಕೊಳ್ಳದ್ದಕ್ಕೆ ಗುರುಗಳು ಹಾಕಿದ ಶಾಪದ ಫಲ.

ರಮೇಶ್, ಹನುಮನಾಳು

*ಸಾಯುವ ಸಮಯದಲ್ಲಿ ಬದುಕಿನಲ್ಲಿ ಮಾಡಿದ ಪಾಪ ಪುಣ್ಯಗಳು ನೆನಪಾಗುತ್ತವಂತೆ. ನಿಜಾನಾ...?*



ಈಗ ಹಾಗೆ ಸಾಯಲೂ ಬಿಡುವಿಲ್ಲ; ಎದೆನೋವು–ಆಂಬುಲೆನ್ಸ್–ಐಸಿಯು–ಸಿಸಿಯು; ಕಡೆಗೆ ಸೀ ಯೂ....!

ಲಕ್ಷ್ಮಣ್, ಜಿ., ಮೈಸೂರು

*ಹೆಂಡತಿಯನ್ನು ಬೆಟರ್ ಹಾಫ್ ಎನ್ನುತ್ತಾರೆ. ಗಂಡ?*

ರಿಮೈಂಡರ್!

ಎಂ.ಎಸ್. ಸೋಮಶೇಖರ್, ಮೈಸೂರು

*ಆನೆಯಲ್ಲಿರುವ ಆತ್ಮಕ್ಕೂ, ಇರುವೆಯಲ್ಲಿರುವ ಆತ್ಮಕ್ಕೂ ರೂಪದಲ್ಲಿ ವ್ಯತ್ಯಾಸವಿರುವುದಿಲ್ಲವೇಕೆ?*

ದೇಹ ವಾಹನ; ಜಗ ಪಾರ್ಕಿಂಗ್ ಲಾಟ್; ಆತ್ಮ ಟೋಕನ್; ಎಲ್ಲ ವಾಹನಗಳಿಗೂ ಟೋಕನ್‌ನ ರೂಪ ಒಂದೇ.

■ ರಾಮ್